# ವಿಜಯನಗರ ಸಾಮ್ರಾಜ್ಯದ ಸಾಹಿತ್ಯ ಸಂಸ್ಕೃತಿ ಮತ್ತು ಕನ್ನಡದ ಪುನರುತ್ಥಾನ

**ಮಯೂರ ರಾಮಚಂದ್ರ ಕುದರಿ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ಸಂಗಮೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚಡಚಣ.

DOI: https://doi.org/10.5281/zenodo.18008491

## ABSTRACT:

ವಿಜಯನಗರ ಸಾಮ್ರಾಜ್ಯ (ಕ್ರಿ.ಶ. 1336–1646) ದಕ್ಷಿಣ ಭಾರತದ ಇತಿಹಾಸದಲ್ಲಿ ರಾಜಕೀಯ–ಸೈನಿಕ ಶಕ್ತಿಯ ಜೊತೆಗೆ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಪುನರ್ಜಾಗರಣದ ಪ್ರಮುಖ ಕೇಂದ್ರವಾಗಿತ್ತು. ಕನ್ನಡ, ತೆಲುಗು, ಸಂಸ್ಕೃತ ಮತ್ತು ತಮಿಳು ಭಾಷೆಗಳ ಪೋಷಣೆಯಾದರೂ, ಕನ್ನಡ ಸಾಹಿತ್ಯದ ಪುನರುತ್ಥಾನದಲ್ಲಿ ಇದರ ಕೊಡುಗೆ ವಿಶೇಷವಾಗಿದೆ. ಜೈನ ಪ್ರಾಬಲ್ಯದಿಂದ ಹೊರಬಂದು ವೀರಶೈವ ಮತ್ತು ವೈಷ್ಣವ ಭಕ್ತಿ ಚಳವಳಿಗಳ ಮೂಲಕ ಕನ್ನಡವು ಜನಸಾಮಾನ್ಯರ ಭಾಷೆಯಾಗಿ ರೂಪುಗೊಂಡಿತು. ಧಾರ್ಮಿಕ ಸಹಿಷ್ಣುತೆ, ರಾಜಾಶ್ರಯ ಮತ್ತು ಜನಪದ ಶೈಲಿಗಳ ಪ್ರೋತ್ಸಾಹವು ಸಾಹಿತ್ಯದ ವೈವಿಧ್ಯತೆಯನ್ನು ವೃದ್ಧಿಸಿತು. ಈ ಲೇಖನವು ವಿಜಯನಗರದ ಐತಿಹಾಸಿಕ ಹಿನ್ನೆಲೆ, ಸಾಹಿತ್ಯ ಸಂಸ್ಕೃತಿ, ಪ್ರಮುಖ ಕವಿಗಳು–ಕೃತಿಗಳು ಮತ್ತು ಕನ್ನಡದ ಪುನರುತ್ಥಾನದ ಮೇಲಿನ ಅದರ ಪ್ರಭಾವವನ್ನು ವಿಶ್ಲೇಷಿಸಿ, ಅದರ ಪರಂಪರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಮುಂದುವರಿಯುತ್ತಿದೆ ಎಂಬುದನ್ನು ತಿಳಿಸಿಕೊಡುತ್ತದೆ.

## KEYWORDS:

ವಿಜಯನಗರ ಸಾಮ್ರಾಜ್ಯ, ಸಾಹಿತ್ಯ ಸಂಸ್ಕೃತಿ, ಕನ್ನಡ ಪುನರುತ್ಥಾನ, ವೀರಶೈವ ಸಾಹಿತ್ಯ, ವೈಷ್ಣವ ಸಾಹಿತ್ಯ

**ಪೀಠಿಕೆ:**

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವು ಅತ್ಯಂತ ಮಹತ್ವದ ಅಧ್ಯಾಯವಾಗಿದೆ. ಸಂಗಮ ವಂಶದ ಹರಿಹರ ಮತ್ತು ಬುಕ್ಕರಿಂದ ಸ್ಥಾಪಿತವಾಗಿ ಸಾಳುವ, ತುಳುವ ಮತ್ತು ಅರವೀಡು ವಂಶಗಳವರೆಗೆ ವಿಸ್ತರಿಸಿದ ಈ ಸಾಮ್ರಾಜ್ಯವು ಉತ್ತರದ ಮುಸ್ಲಿಮರ ಆಕ್ರಮಣಗಳ ವಿರುದ್ಧ ದಕ್ಷಿಣ ಭಾರತದ ಸಂಸ್ಕೃತಿಯ ರಕ್ಷಣಾ ಕೇಂದ್ರವಾಗಿ ಬೆಳೆಯಿತು. ತುಂಗಭದ್ರಾ ನದಿಯ ದಡದಲ್ಲಿರುವ ಹಂಪಿ ಅದರ ರಾಜಧಾನಿಯಾಗಿದ್ದು, ಆ ಕಾಲದಲ್ಲಿ ವಿಶ್ವದ ಪ್ರಮುಖ ನಗರಗಳಲ್ಲಿ ಒಂದಾಗಿತ್ತು. ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಸಾಮ್ರಾಜ್ಯ ತನ್ನ ಶ್ರೇಷ್ಠಾವಸ್ಥೆಯನ್ನು ತಲುಪಿ, ಸಾಹಿತ್ಯ ಮತ್ತು ಕಲೆಗೆ ವಿಶಿಷ್ಟ ಪ್ರೋತ್ಸಾಹ ದೊರಕಿತು. ಈ ಯುಗದಲ್ಲಿ ಕನ್ನಡ ಸಾಹಿತ್ಯವು ಜೈನ ಪ್ರಾಬಲ್ಯದಿಂದ ಹೊರಬಂದು ವೀರಶೈವ ಮತ್ತು ವೈಷ್ಣವ ಭಕ್ತಿ ಚಳವಳಿಗಳ ಮೂಲಕ ಪುನರುತ್ಥಾನಗೊಂಡಿತು. ಧಾರ್ಮಿಕ, ಸಾಮಾಜಿಕ ಮತ್ತು ಲೌಕಿಕ ವಿಷಯಗಳನ್ನು ಒಳಗೊಂಡ ಬಹುಭಾಷಾ ಸಾಹಿತ್ಯ ಸಂಸ್ಕೃತಿ ವಿಜಯನಗರ ಸಾಮ್ರಾಜ್ಯದ ಪ್ರಮುಖ ಲಕ್ಷಣವಾಗಿದ್ದು, ಕನ್ನಡದ ಬೆಳವಣಿಗೆಯಲ್ಲಿ ಹಾಗೂ ರಾಜಾಶ್ರಯ ಮತ್ತು ಧಾರ್ಮಿಕ ಸಹಿಷ್ಣುತೆಯಲ್ಲಿ ಪ್ರಮುಖ ಪಾತ್ರವಹಿಸಿತು.

**ಐತಿಹಾಸಿಕ ಹಿನ್ನೆಲೆ:**

14ನೇ ಶತಮಾನದ ಆರಂಭದಲ್ಲಿ ದೆಹಲಿ ಸುಲ್ತಾನರ ಮತ್ತು ಬಹಮನಿ ಸಾಮ್ರಾಜ್ಯದ ಆಕ್ರಮಣಗಳಿಂದ ಹೊಯ್ಸಳ ಮತ್ತು ಕಾಕತೀಯ ಸಾಮ್ರಾಜ್ಯಗಳು ಕುಸಿದಾಗ, ವಿಜಯನಗರವು ಹಿಂದೂ ಸಂಸ್ಕೃತಿಯ ರಕ್ಷಣಾ ಕೇಂದ್ರವಾಯಿತು. ವಿದ್ಯಾರಣ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ

ಸ್ಥಾಪಿತವಾದ ಈ ಸಾಮ್ರಾಜ್ಯವು ಧಾರ್ಮಿಕ ಸಹಿಷ್ಣುತೆಯನ್ನು ಪ್ರದರ್ಶಿಸಿತು, ಶೈವರು, ವೈಷ್ಣವರು ಮತ್ತು ಜೈನರನ್ನು ಪೋಷಿಸಿತು. ರಾಜಧಾನಿ ಹಂಪಿಯು ಆರ್ಥಿಕ ಸಮೃದ್ಧಿ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು. ತಾಳಿಕೋಟೆ ಯುದ್ಧ (1565)ದ ನಂತರ ಪತನಗೊಂಡರೂ, ಅದರ ಸಾಂಸ್ಕೃತಿಕ ಪರಂಪರೆ ಮೈಸೂರಿನ ಒಡೆಯರು, ಕೆಳದಿಯ ನಾಯಕರು ಮತ್ತು ಇತರ ಸಂಸ್ಥಾನಗಳಲ್ಲಿ ಮುಂದುವರೆಯಿತು. ಸಾಮ್ರಾಜ್ಯದ ಆಡಳಿತಗಾರರು ಸಾಹಿತ್ಯಕ್ಕೆ ರಾಜಾಶ್ರಯ ನೀಡಿರುವುದು ಸಾಹಿತ್ಯದ ಬೆಳವಣಿಗೆಗೆ ಪೂರಕವಾಯಿತು ಎಂದು ಹೇಳಬಹುದು.

**ಸಾಹಿತ್ಯ ಸಂಸ್ಕೃತಿ:**

ವಿಜಯನಗರ ಸಾಮ್ರಾಜ್ಯದ ಸಾಹಿತ್ಯ ಸಂಸ್ಕೃತಿ ಬಹಳ ವೈವಿಧ್ಯಮಯವಾಗಿತ್ತು. ಕನ್ನಡ, ತೆಲುಗು, ಸಂಸ್ಕೃತ ಮತ್ತು ತಮಿಳು ಭಾಷೆಗಳು ಒಟ್ಟಿಗೆ ಸಮೃದ್ಧವಾಗಿ ಬೆಳೆದವು. ಶಿವಭಕ್ತಿ, ವಿಷ್ಣುಭಕ್ತಿ, ಜೈನ ಧರ್ಮ ಮತ್ತು ಜೀವನದ ಸಾಮಾನ್ಯ ವಿಷಯಗಳು ಎಲ್ಲವೂ ಸಮಾನವಾಗಿ ಸೃಜನಶೀಲತೆಯನ್ನು ಪಡೆದುಕೊಂಡವು. ಹೊಯ್ಸಳ ಕಾಲದಲ್ಲಿ ಕಾವ್ಯಗಳು ಹೆಚ್ಚಾಗಿ ಚಂಪೂ ಶೈಲಿಯಲ್ಲಿದ್ದವು – ಸಂಸ್ಕೃತ ಮಿಶ್ರಿತ, ಗದ್ಯ–ಪದ್ಯ ಎರಡೂ ಇರುತ್ತಿದ್ದವು, ಓದಲು ಕಷ್ಟ, ಆಸ್ಥಾನದಲ್ಲಿ ಮಾತ್ರ ಆಸ್ವಾದಿಸುತ್ತಿದ್ದರು. ವಿಜಯನಗರದಲ್ಲಿ ಇದು ಬದಲಾವಣೆಗೆ ಒಳಪಟ್ಟಿತು. ಸಾಹಿತ್ಯವು ಸರಳ, ಜನಪದ ಲಯದ ಕಾವ್ಯ ರೂಪಗಳ ಕಡೆಗೆ ತಿರುಗಿತು. ಷಟ್ಪದಿಯು ದೊಡ್ಡ ಕಥೆಗಳನ್ನು ಹೇಳಲು ಉತ್ತಮವಾಯಿತು, ಸಾಂಗತ್ಯ–ಸುಳಾದಿ–ಉಗಾಭೋಗಗಳು ರಾಗಕ್ಕೆ ಹಾಕಿ ಹಾಡಲು ಸುಲಭವಾದವು, ತ್ರಿಪದಿ ಮತ್ತು ವಚನಗಳು ಸಣ್ಣ ಸಂದೇಶಗಳಿಗೆ ಸೂಕ್ತವಾದವು. ಈ ಬದಲಾವಣೆಯಿಂದ ಕಾವ್ಯವು ರಾಜಮನೆಯ ಗೋಡೆಗಳನ್ನು ದಾಟಿ ಗ್ರಾಮಗಳಿಗೆ, ದೇವಾಲಯಗಳಿಗೆ, ಜಾತ್ರೆ–ಉತ್ಸವಗಳಿಗೆ ಹರಡಿತು. ಹರಿದಾಸರು ಊರೂರು ತಿರುಗಿ ಭಜನಾ ಪದಗಳನ್ನು ಹಾಡಿದರು, ವೀರಶೈವರು ಶಿವನ ಕಥೆಗಳನ್ನು ಹೇಳಿದರು, ಜನಪದ ಕಥಕರು ರಾಮಾಯಣ–ಭಾರತವನ್ನು ಹಾಡಿದರು. ಇದರಿಂದ ಸಾಹಿತ್ಯವು ಜನರ ದಿನನಿತ್ಯದ ಜೀವನದ ಭಾಗವಾಯಿತು. ರಾಜರುಗಳು ಇದಕ್ಕೆ ಹೆಚ್ಚಿನ ಬೆಂಬಲ ನೀಡಿದರು – ಕೃಷ್ಣದೇವರಾಯ, ಎರಡನೇ ದೇವರಾಯರಂತಹ ರಾಜರು ಸ್ವತಃ ಕವಿಗಳಾಗಿ, ಆಸ್ಥಾನದಲ್ಲಿ ಕವಿಗಳನ್ನು ಪೋಷಿಸಿ ಎಲ್ಲ ಧರ್ಮಗಳ ಕವಿಗಳಿಗೂ ಆಶ್ರಯ ನೀಡಿದರು. ಹೀಗೆ ವಿಜಯನಗರದ ಸಾಹಿತ್ಯ ಸಂಸ್ಕೃತಿ ರಾಜಮನೆಯ ಗಾಂಭೀರ್ಯ ಮತ್ತು ಗ್ರಾಮದ ಸರಳತೆಯ ನಡುವೆ ಸುಂದರ ಸೇತುವೆಯಾಗಿ ಮಾರ್ಪಾಡಾಯಿತು.

**ವಿಜಯನಗರ ಕಾಲದ ಕನ್ನಡ ಸಾಹಿತ್ಯದ ವಿಂಗಡಣೆ:**

ವಿಜಯನಗರ ಸಾಮ್ರಾಜ್ಯದಲ್ಲಿ (ಕ್ರಿ.ಶ. 1336–1646) ಕನ್ನಡ ಸಾಹಿತ್ಯವು ಭಕ್ತಿ ಚಳವಳಿಯ ಪ್ರಭಾವದಿಂದ ಹುಲುಸಾಗಿ ಬೆಳೆಯಿತು. ಜೈನ ಸಾಹಿತ್ಯದ ಪ್ರಾಬಲ್ಯ ಕಡಿಮೆಯಾಗಿ, ವೀರಶೈವ ಮತ್ತು ವೈಷ್ಣವ ಸಾಹಿತ್ಯಗಳು ಪ್ರಮುಖವಾದವು. ಎರಡನೇ ದೇವರಾಯನ ಕಾಲದಲ್ಲಿ ವೀರಶೈವ ಸಾಹಿತ್ಯ ಉತ್ತುಂಗಕ್ಕೇರಿತು, ಆದರೆ ಕೃಷ್ಣದೇವರಾಯನ ಕಾಲದಲ್ಲಿ ವೈಷ್ಣವ ಹರಿದಾಸ ಸಾಹಿತ್ಯ ಪ್ರಬಲವಾಗಿ ಬೆಳೆಯುವುದರ ಜೊತೆ ಲೌಕಿಕ ವಿಷಯಗಳೂ ಸಾಹಿತ್ಯದಲ್ಲಿ ಸ್ಥಾನವನ್ನು ಪಡೆದವು.

**ವಿಜಯನಗರ ಕಾಲದ ವೀರಶೈವ ಸಾಹಿತ್ಯ:**

ವಿಜಯನಗರ ಸಾಮ್ರಾಜ್ಯದಲ್ಲಿ (ಕ್ರಿ.ಶ. 1336–1646) ವೀರಶೈವ ಸಾಹಿತ್ಯವು ಬಸವಣ್ಣ ಮತ್ತು ಅಲ್ಲಮಪ್ರಭುಗಳ ವಚನ ಪರಂಪರೆಯನ್ನು ಮುಂದುವರಿಸಿ ಹುಲುಸಾಗಿ ಬೆಳೆಯಿತು. ಶಿವಭಕ್ತಿ, ಸಮಾನತೆ, ಸಾಮಾಜಿಕ ಸುಧಾರಣೆ ಮತ್ತು ಲಿಂಗಾಯತ ತತ್ತ್ವಗಳನ್ನು ಒತ್ತಿಹೇಳುವ ಪುರಾಣಗಳು, ಚರಿತ್ರೆಗಳು ಮತ್ತು ತಾತ್ತ್ವಿಕ ಗ್ರಂಥಗಳು ರಚನೆಗೊಂಡವು, ಎರಡನೇ ದೇವರಾಯನ ಆಳ್ವಿಕೆಯಲ್ಲಿ (ಕ್ರಿ.ಶ. 1423–1446) ಇದು ಉತ್ತುಂಗದಲ್ಲಿತ್ತು. ವೀರಶೈವ ಕವಿಗಳು ಷಟ್ಪದಿ, ಭಾಮಿನಿ ಷಟ್ಪದಿ ಮತ್ತು ಛಂದಸ್ಸಿನ ಬಳಕೆಯನ್ನು ಬಳಸಿದರು.

**ಪ್ರಮುಖ ಕವಿಗಳು ಮತ್ತು ಕೃತಿಗಳು:**

- ಭೀಮಕವಿ – ಬಸವಪುರಾಣ (ಸು. 14ನೇ ಶತಮಾನ): ಬಸವಣ್ಣನವರ ಜೀವನ, ಕಾರ್ಯಗಳು ಮತ್ತು ವೀರಶೈವ ತತ್ತ್ವಗಳನ್ನು ವಿವರಿಸುವ ಪ್ರಮುಖ ವೀರಶೈವ ಪುರಾಣಕೃತಿ. ಇದು ವಿಜಯನಗರ ಯುಗದ ಆರಂಭಿಕ ವೀರಶೈವ ಸಾಹಿತ್ಯಕ್ಕೆ ಸೇರಿರುತ್ತದೆ.
- ಚಾಮರಸ – ಪ್ರಭುಲಿಂಗ ಲೀಲೆ (ಸು. 1430): ಅಲ್ಲಮಪ್ರಭುವಿನ ಜೀವನವನ್ನು ಶಿವನ ಲೀಲೆಯ ರೂಪದಲ್ಲಿ ನಿರೂಪಿಸುವ ಭಾಮಿನಿ ಷಟ್ಪದಿ ಶೈಲಿಯ ಮಹಾಕಾವ್ಯ. ಈ ಕೃತಿ ವೀರಶೈವ ಸಾಹಿತ್ಯದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದ್ದು, ನಂತರದ ಕಾಲದಲ್ಲಿ ಇತರ ಭಾರತೀಯ ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡಿರುವುದರ ಬಗ್ಗೆ ತಿಳಿದುಬರುತ್ತದೆ.
- ಲಕ್ಕಣ್ಣ ದಂಡೇಶ– ಶಿವತತ್ತ್ವ ಚಿಂತಾಮಣಿ: ವೀರಶೈವ ತತ್ತ್ವಶಾಸ್ತ್ರವನ್ನು ವ್ಯವಸ್ಥಿತವಾಗಿ ವಿವರಿಸುವ ಬೃಹತ್ ಗ್ರಂಥ. ಇದರಲ್ಲಿ ಷಟಸ್ಥಲ ತತ್ತ್ವಗಳು, ಶಿವಭಕ್ತಿ ಹಾಗೂ ಬಸವಣ್ಣ ಮತ್ತು ಇತರ ಶಿವಶರಣರ ಕುರಿತು ವಿವರಣೆಗಳಿವೆ. ಇದನ್ನು ವೀರಶೈವ ತತ್ತ್ವಗ್ರಂಥಗಳಲ್ಲಿ ಪ್ರಮುಖವೆಂದು ಪರಿಗಣಿಸಲಾಗುತ್ತದೆ.
- ಜಕ್ಕಣಾರ್ಯ – ಏಕೋತ್ತರ ಷಟಸ್ಥಲ (ಸು. 15ನೇ ಶತಮಾನ): ವೀರಶೈವ ಧರ್ಮದ ಷಟಸ್ಥಲ ತತ್ತ್ವಗಳನ್ನು ಕ್ರಮಬದ್ಧವಾಗಿ ವಿವರಿಸುವ ತತ್ತ್ವಗ್ರಂಥ. ಇದು ವೀರಶೈವ ಸಿದ್ಧಾಂತ ಸಾಹಿತ್ಯದ ಭಾಗವಾಗಿದೆ.
- ಮಲ್ಲನಾರ್ಯ – ಭಾವಚಿಂತಾರತ್ನ (1513), ವೀರಶೈವಾಮೃತ ಪುರಾಣ (1530): ವೀರಶೈವ ತತ್ತ್ವ , ಭಕ್ತಿ ಮತ್ತು ನೈತಿಕ ಚಿಂತನೆಗಳನ್ನು ಒಳಗೊಂಡ ಪ್ರಮುಖ ಕೃತಿಗಳು. ಈ ಕೃತಿಗಳು ವಿಜಯನಗರ ಯುಗದ ಉತ್ತರಾರ್ಧದ ವೀರಶೈವ ಸಾಹಿತ್ಯವನ್ನು ಪ್ರತಿನಿಧಿಸುತ್ತವೆ.
- ವಿರೂಪಾಕ್ಷ ಪಂಡಿತ (ವಿರೂಪಾಕ್ಷ ದೇವಾಲಯದ ಪುರೋಹಿತ)–ಚೆನ್ನಬಸವ ಪುರಾಣ (1584) : ಚೆನ್ನಬಸವಣ್ಣನವರ ಜೀವನ ಮತ್ತು ಇತರ ಶಿವಶರಣರ ಕಥನಗಳನ್ನು ಒಳಗೊಂಡಿರುವ ಪುರಾಣಕೃತಿ. ಇದರಲ್ಲಿನ ಕೆಲವು ವರ್ಣನೆಗಳು ವಿಜಯನಗರ ಕಾಲದ ಸಾಮಾಜಿಕ ಹಾಗೂ ಧಾರ್ಮಿಕ ಪರಿಸರವನ್ನು ತಿಳಿಯಲು ಸಹಾಯಕವಾಗಿವೆ.

ಈ ಸಾಹಿತ್ಯವು 12ನೇ ಶತಮಾನದ ವಚನ ಚಳವಳಿಯನ್ನು ಪುನರುಜ್ಜೀವನಗೊಳಿಸಿ, ವಿಜಯನಗರದ ಸಾಮಾಜಿಕ–ಧಾರ್ಮಿಕ ಜೀವನವನ್ನು ಪ್ರತಿಬಿಂಬಿಸುತ್ತದೆ. ಇದು ಕನ್ನಡ ಸಾಹಿತ್ಯದ ಪುನರ್‌ಜಾಗೃತಿಗೆ ಮಹತ್ವದ ಕೊಡುಗೆ ನೀಡಿ ನಂತರದ ಕಾಲದಲ್ಲೂ ಪ್ರಭಾವ ಬೀರಿತು.

**ವಿಜಯನಗರ ಕಾಲದ ವೈಷ್ಣವ ಸಾಹಿತ್ಯ:**

ವಿಜಯನಗರ ಸಾಮ್ರಾಜ್ಯದಲ್ಲಿ (ಕ್ರಿ.ಶ. 1336–1646) ವೈಷ್ಣವ ಸಾಹಿತ್ಯವು ಮಧ್ವಾಚಾರ್ಯರ ದ್ವೈತ ವೇದಾಂತದಿಂದ ಪ್ರೇರಿತವಾಗಿ ಭಕ್ತಿ ಚಳವಳಿಯ ಮೂಲಕ ಅಪಾರ ಬೆಳವಣಿಗೆ ಕಂಡಿತು. ಹರಿದಾಸ ಸಾಹಿತ್ಯವು ಪ್ರಮುಖವಾಗಿ ರಾಮ–ಕೃಷ್ಣ ಭಕ್ತಿಯನ್ನು ಕೇಂದ್ರೀಕರಿಸಿ, ಜಾನಪದ ಶೈಲಿಯಲ್ಲಿ ಬೆಳೆಯಿತು. ಇದು ಕರ್ನಾಟಕ ಸಂಗೀತದ ಬೆಳವಣಿಗೆಗೂ ಆಧಾರವಾಯಿತು. ಕೃಷ್ಣದೇವರಾಯನ ಆಳ್ವಿಕೆಯಲ್ಲಿ (1509–1529) ಹರಿದಾಸ ಚಳವಳಿ ಉತ್ತುಂಗಕ್ಕೇರಿತು. ವ್ಯಾಸತೀರ್ಥರು (ವ್ಯಾಸರಾಜರು) ಕೃಷ್ಣದೇವರಾಯನ ರಾಜಗುರುಗಳಾಗಿದ್ದರು ಮತ್ತು ಹರಿದಾಸರನ್ನು ಪ್ರೋತ್ಸಾಹಿಸಿದರು.

**ಪ್ರಮುಖ ಕವಿಗಳು ಮತ್ತು ಕೃತಿಗಳು:**

- ಕುಮಾರವ್ಯಾಸ (ನಾರಣಪ್ಪ) – ಕರ್ಣಾಟ ಭಾರತ ಕಥಾಮಂಜರಿ / ಗದುಗಿನ ಭಾರತ (ಸು. 1430): ಮಹಾಭಾರತದ ಮೊದಲ ಹತ್ತು ಪರ್ವಗಳನ್ನು ಭಾಮಿನಿ ಷಟ್ಪದಿ ಛಂದಸ್ಸಿನಲ್ಲಿ ರಚಿಸಿದ ಮಹಾಕಾವ್ಯ. ಜಾನಪದ ಶೈಲಿ, ಸಂಭಾಷಣಾತ್ಮಕ ಭಾಷೆ, ವೀರರಸ ಮತ್ತು ಮಾನವೀಯ ಭಾವನೆಗಳ ನೈಜ ನಿರೂಪಣೆ ಇದರ ಪ್ರಮುಖ ಲಕ್ಷಣಗಳು. ವಿಜಯನಗರ ಯುಗದ ಲೌಕಿಕ–ಭಕ್ತಿಯ ಸಂಯೋಜಿತ ಕಾವ್ಯದ ಶ್ರೇಷ್ಠ ಉದಾಹರಣೆ ಇದಾಗಿದೆ.
- ತಿಮ್ಮಣ್ಣ ಕವಿ – ಕೃಷ್ಣರಾಯ ಭಾರತ (ಸು. 1510): ವಿಜಯನಗರ ಸಾಮ್ರಾಟ ಕೃಷ್ಣದೇವರಾಯನ ಆಶ್ರಯದಲ್ಲಿ ರಚಿತವಾದ ಮಹಾಭಾರತಾಧಾರಿತ ಕಾವ್ಯ. ಅರಮನೆ ಸಾಹಿತ್ಯ ಪರಂಪರೆಯನ್ನು ಪ್ರತಿನಿಧಿಸುವ ಕೃತಿ.
- ಕುಮಾರ ವಾಲ್ಮೀಕಿ – ತೋರವೆ ರಾಮಾಯಣ (ಸು. 1500): ರಾಮಾಯಣದ ಕನ್ನಡ ಜಾನಪದ ಆವೃತ್ತಿ. ಸರಳ ಭಾಷೆ, ಕಥನಾತ್ಮಕ ಶೈಲಿ ಮತ್ತು ಜನಸಾಮಾನ್ಯರಿಗೆ ಸುಲಭವಾಗಿ ಗ್ರಹಣೀಯವಾದ ನಿರೂಪಣೆ ಇದರ ವೈಶಿಷ್ಟ್ಯ .
- ಪುರಂದರದಾಸ : ವೈಷ್ಣವ ಹರಿದಾಸ ಪರಂಪರೆಯ ಪ್ರಮುಖ ಕವಿ–ಸಂಗೀತಗಾರ. ಪರಂಪರೆಯ ಪ್ರಕಾರ ಅಪಾರ ಸಂಖ್ಯೆಯ ಕೀರ್ತನೆಗಳನ್ನು ರಚಿಸಿದ್ದಾನೆಂದು ಹೇಳಲಾಗುತ್ತದೆ; ಇಂದಿನ ದಿನಗಳಲ್ಲಿ ಸುಮಾರು 1,000–1,200 ಕೀರ್ತನೆಗಳು ಮಾತ್ರ ಲಭ್ಯವಿವೆ. ದೇವರನಾಮಗಳು, ಸುಳಾದಿಗಳು ಮತ್ತು ಉಗಾಭೋಗಗಳು ವಿಶೇಷವಾಗಿ ಪ್ರಸಿದ್ಧವಾಗಿವೆ.
- ಕನಕದಾಸ – ಮೋಹನ ತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ, ರಾಮಧಾನ್ಯ ಚರಿತ್ರೆ (ಸು. 1550): ಸಾಮಾಜಿಕ ಸಮಾನತೆ, ಮಾನವೀಯ ಮೌಲ್ಯಗಳು ಮತ್ತು ಭಕ್ತಿಯನ್ನು ಕೇಂದ್ರವಾಗಿಟ್ಟುಕೊಂಡ ಕೃತಿಗಳು. ರಾಮಧಾನ್ಯ ಚರಿತ್ರೆ ಸಾಮಾಜಿಕ ಅಸಮಾನತೆಗಳ ವಿರುದ್ಧದ ರೂಪಕಾತ್ಮಕ ಕಾವ್ಯವಾಗಿ ವಿಶೇಷ ಮಹತ್ವ ಹೊಂದಿರುವ ಕೃತಿಯಾಗಿದೆ.

ಈ ಸಾಹಿತ್ಯವು ಭಕ್ತಿ, ಸಂಗೀತ ಮತ್ತು ಜಾನಪದ ಸಂಸ್ಕೃತಿಯನ್ನು ಸಂಯೋಜಿಸಿ ಕನ್ನಡದ ಪುನರುಜ್ಜೀವನಕ್ಕೆ ಮಹತ್ವದ ಕೊಡುಗೆಯನ್ನು ನೀಡಿವೆ. ವಿಜಯನಗರ ಸಾಮ್ರಾಜ್ಯದ ಪತನದ ನಂತರವೂ ಇದರ ಪ್ರಭಾವ ಮೈಸೂರು ಮತ್ತು ಇತರ ಆಸ್ಥಾನಗಳಲ್ಲಿ ಮುಂದುವರೆದಿರುವುದನ್ನು ನಾವು ಮನಗಾಣುತ್ತೇವೆ.

**ವಿಜಯನಗರ ಕಾಲದ ಜೈನ ಸಾಹಿತ್ಯ:**

ವಿಜಯನಗರ ಸಾಮ್ರಾಜ್ಯದಲ್ಲಿ (ಕ್ರಿ.ಶ. 1336–1646) ಜೈನ ಸಾಹಿತ್ಯವು ಹೊಯ್ಸಳರ ಕಾಲದಂತೆ ಪ್ರಾಬಲ್ಯ ಹೊಂದಿರಲಿಲ್ಲ. ಭಕ್ತಿ ಚಳವಳಿಗಳು (ವೀರಶೈವ ಮತ್ತು ವೈಷ್ಣವ) ಬಲಗೊಂಡಿದ್ದರಿಂದ ಜೈನ ಧರ್ಮದ ಪ್ರಭಾವ ಕಡಿಮೆಯಾಯಿತು. ಆದರೂ ರಾಜರ ಸಹಿಷ್ಣುತೆಯಿಂದ ಕೆಲವು ಜೈನ ಕವಿಗಳ ಕೃತಿಗಳು ರಚಿತವಾದವು. ಈ ಸಾಹಿತ್ಯವು ಮುಖ್ಯವಾಗಿ ತೀರ್ಥಂಕರರ ಚರಿತ್ರೆ, ನೈತಿಕತೆ ಮತ್ತು ಜೈನ ತತ್ತ್ವಗಳನ್ನು ವರ್ಣಿಸುತ್ತವೆ.

**ಪ್ರಮುಖ ಕವಿಗಳು ಮತ್ತು ಕೃತಿಗಳು:**

- ಮಧುರ – ಧರ್ಮನಾಥ ಪುರಾಣ (ಸು. ಕ್ರಿ.ಶ. 1385): ಜೈನ ಧರ್ಮದ ಹದಿನೈದನೇ ತೀರ್ಥಂಕರರಾದ ಧರ್ಮನಾಥರ ಜೀವನ, ತ್ಯಾಗ ಮತ್ತು ಧಾರ್ಮಿಕ ಆದರ್ಶಗಳನ್ನು ವಿವರಿಸುವ ಪುರಾಣಾತ್ಮಕ ಕೃತಿ ಇದಾಗಿದೆ.
- ರತ್ನಕರವರ್ಣಿ – ಭರತೇಶ ವೈಭವ (ಸು. ಕ್ರಿ.ಶ. 1557): ಭರತ ಚಕ್ರವರ್ತಿಯ ಚರಿತ್ರೆಯನ್ನು ಆಧಾರವಾಗಿಟ್ಟುಕೊಂಡ ಬೃಹತ್ ಜೈನ ಮಹಾಕಾವ್ಯ. ಜೈನ ಧಾರ್ಮಿಕ ತತ್ತ್ವಗಳು ಮತ್ತು ಕಾವ್ಯಾತ್ಮಕ ವರ್ಣನೆಯ ಸಮನ್ವಯ ಈ ಕೃತಿಯ ಪ್ರಮುಖ

ಲಕ್ಷಣವಾಗಿದೆ.

- ಸಾಲ್ವ ಕವಿ – ಸಾಲ್ವ ಭಾರತ : ಮಹಾಭಾರತ ಕಥೆಯನ್ನು ಜೈನ ದೃಷ್ಟಿಕೋಣದಿಂದ ನಿರೂಪಿಸುವ ಕನ್ನಡ ಕೃತಿ ಇದಾಗಿದೆ. ಇದು ವಿಜಯನಗರ ಯುಗದ ಜೈನ ಸಾಹಿತ್ಯ ಪರಂಪರೆಯೊಂದಿಗೆ ಸಂಬಂಧಿಸಿದ ಕೃತಿಯಾಗಿದೆ.
- ಅಭಿನವ ವಾಡಿ ವಿದ್ಯಾನಂದ – ಕಾವ್ಯಸಾರ: ಕಾವ್ಯಶಾಸ್ತ್ರ ಮತ್ತು ನೈತಿಕ ಚಿಂತನೆಗಳಿಗೆ ಸಂಬಂಧಿಸಿದ ಜೈನ ತಾತ್ತ್ವಿಕ ಕೃತಿಯಾಗಿದ್ದು, ಕಾವ್ಯದ ಸ್ವರೂಪ ಮತ್ತು ಮೌಲ್ಯಗಳ ಬಗ್ಗೆ ಚರ್ಚಿಸುತ್ತದೆ.
- ಅಂಡಯ್ಯ – ಕಬ್ಬಿಗರ ಕಾವ (ಅಥವಾ ಕಬ್ಬಿಗರ ಕಾವ್ಯ): ಸಂಸ್ಕೃತ ಪದಗಳನ್ನು ಬಹುಮಟ್ಟಿಗೆ ತೊರೆದು ಶುದ್ಧ ಕನ್ನಡ ಪ್ರಯೋಗವನ್ನು ಮಾಡಿರುವ ಕಾರಣದಿಂದ ಪ್ರಸಿದ್ಧವಾಗಿದೆ. ಈ ಕೃತಿ ಜೈನ ಧಾರ್ಮಿಕ ತತ್ತ್ವಗಳನ್ನು ಕಾವ್ಯರೂಪದಲ್ಲಿ ನಿರೂಪಿಸುತ್ತದೆ.

ಈ ಕಾಲದಲ್ಲಿ ಜೈನ ಸಾಹಿತ್ಯವು ಅಹಿಂಸೆ, ತ್ಯಾಗ ಮತ್ತು ನೈತಿಕ ಜೀವನವನ್ನು ಪ್ರಚಾರ ಮಾಡಿತು. ವಿಜಯನಗರದ ಪತನದ ನಂತರವೂ ಕರ್ನಾಟಕದ ಕೆಲವು ಭಾಗಗಳಲ್ಲಿ ಜೈನ ಪರಂಪರೆ ಮುಂದುವರಿದಿತು, ಉದಾಹರಣೆಗೆ ಶ್ರವಣಬೆಳಗೊಳ ಮತ್ತು ಮೂಡಬಿದ್ರಿ. ಆದರೆ ಒಟ್ಟಾರೆಯಾಗಿ ಭಕ್ತಿ ಸಾಹಿತ್ಯದ ಎದುರು ಇದು ಹಿನ್ನಡೆ ಕಂಡಿತು.

**ವಿಜಯನಗರ ಕಾಲದ ಲೌಕಿಕ ಸಾಹಿತ್ಯ**

ವಿಜಯನಗರ ಸಾಮ್ರಾಜ್ಯದಲ್ಲಿ (ಕ್ರಿ.ಶ. 1336–1646) ಲೌಕಿಕ ಸಾಹಿತ್ಯವು ಧಾರ್ಮಿಕೇತರ ವಿಷಯಗಳನ್ನು ಒಳಗೊಂಡಿತ್ತು. ಪ್ರಣಯ, ಸಾಮಾಜಿಕ ಜೀವನ, ಕಾಮಶಾಸ್ತ್ರ, ಶೃಂಗಾರ ಕಥೆಗಳು ಮತ್ತು ವ್ಯಾಕರಣದಂತಹ ವಿಷಯಗಳು ಪ್ರಮುಖವಾಗಿದ್ದವು. ಭಕ್ತಿ ಸಾಹಿತ್ಯದ ಪ್ರಾಬಲ್ಯದ ನಡುವೆಯೂ ಈ ಸಾಹಿತ್ಯವು ಕನ್ನಡ ಭಾಷೆಯ ವೈವಿಧ್ಯತೆಯನ್ನು ತೋರಿಸಿತು. ಕವಿಗಳು ಚಂಪೂ, ಷಟ್ಪದಿ ಮತ್ತು ಜಾನಪದ ಶೈಲಿಗಳನ್ನು ಬಳಸಿದರು ಎನ್ನುವುದಕ್ಕೆ ಸಾಕ್ಷಿಯಾಗಿವೆ.

**ಪ್ರಮುಖ ಕನ್ನಡ ಲೌಕಿಕ ಕೃತಿಗಳು:**

- ಅಂಡಯ್ಯ (ಅಂಡೆಯ್ಯ ) – ಕಬ್ಬಿಗರ ಕಾವ (ಸು. ಕ್ರಿ.ಶ. 13ನೇ ಶತಮಾನ): ಸಂಸ್ಕೃತ ಪದಗಳನ್ನು ಬಹುಮಟ್ಟಿಗೆ ತಪ್ಪಿಸಿ ಶುದ್ಧ ಕನ್ನಡ ಪ್ರಯೋಗಕ್ಕೆ ಮಹತ್ವ ನೀಡಿದ ಚಂಪೂ ಕಾವ್ಯ. ಜೈನ ಧಾರ್ಮಿಕ ಹಿನ್ನೆಲೆಯೊಂದಿಗೆ ಪ್ರಣಯ ಮತ್ತು ಮಾನವ ಸಂಬಂಧಗಳನ್ನು ನಿರೂಪಿಸುವ ಲೌಕಿಕ ಸ್ವರೂಪದ ಪ್ರಮುಖ ಕೃತಿ ಎಂದು ಪರಿಗಣಿಸಲಾಗಿದೆ.
- ಭಾಸ್ಕರ – ಜೀವಂಧರ ಚರಿತೆ (ಕ್ರಿ.ಶ. 1424): ಜೀವಂಧರ ಎಂಬ ರಾಜಕುಮಾರನ ಜೀವನಕಥೆಯನ್ನು ಆಧಾರವಾಗಿಟ್ಟುಕೊಂಡ ಜೈನ ಸಾಹಿತ್ಯಕೃತಿ. ಇದರಲ್ಲಿ ಲೌಕಿಕ ಮತ್ತು ಸಾಮಾಜಿಕ ಅಂಶಗಳೊಂದಿಗೆ ನೈತಿಕ ವಿಚಾರಗಳೂ ಕಾಣಿಸುತ್ತವೆ.
- ದೇಪರಾಜ (ದೇವರಾಜ) – ಅಮರುಕ ಮತ್ತು ಸೋಬಗಿನ ಸೋನೆ (ಸು. ಕ್ರಿ.ಶ. 15ನೇ ಶತಮಾನ): ಪ್ರಣಯ ಮತ್ತು ಸೌಂದರ್ಯ ವಿಷಯಗಳನ್ನು ಕೇಂದ್ರವಾಗಿಟ್ಟುಕೊಂಡ ಲೌಕಿಕ ಕಾವ್ಯಗಳು. ವಿಜಯನಗರ ಯುಗದ ಸಾಹಿತ್ಯಿಕ ರುಚಿಯನ್ನು ಪ್ರತಿಬಿಂಬಿಸುತ್ತವೆ.
- ಭಟ್ಟಾಕಳಂಕ – ಕರ್ನಾಟಕ ಶಬ್ದಾನುಶಾಸನ (ಕ್ರಿ.ಶ. 1604): ಸಂಸ್ಕೃತ ವ್ಯಾಕರಣ ಪರಂಪರೆಯ ಆಧಾರದ ಮೇಲೆ ರೂಪುಗೊಂಡ ಕನ್ನಡ ವ್ಯಾಕರಣ ಗ್ರಂಥ. ಕನ್ನಡ ಭಾಷೆಯ ವ್ಯಾಕರಣವನ್ನು ಕ್ರಮಬದ್ಧವಾಗಿ ವಿವರಿಸುವ ಮಹತ್ವದ ಕೃತಿಯಾಗಿ ಗುರುತಿಸಲಾಗಿದೆ.

**ರಾಜರುಗಳ ಲೌಕಿಕ ಕೊಡುಗೆಗಳು (ಇತರ ಭಾಷೆಗಳಲ್ಲಿ ):**

- ರಾಮನಾಥ ಚರಿತೆ / ಕುಮಾರರಾಮನ ಸಾಂಗತ್ಯ (ನಂಜುಂಡ ಕವಿ – ಕ್ರಿ.ಶ. 1525): ಇದು ಕಂಪಿಲದ ವೀರನಾದ ಕುಮಾರರಾಮನ ಜೀವನ ಮತ್ತು ಸಾಹಸಗಳನ್ನು ವರ್ಣಿಸುವ ಐತಿಹಾಸಿಕ ಕಾವ್ಯ. ಇದು ಜನಪದ ಮತ್ತು ಇತಿಹಾಸದ ಮಿಶ್ರಣವಾಗಿದೆ.
- ಮಧುರಾ ವಿಜಯಂ (ಗಂಗಾದೇವಿ): ಇದು ಸಂಸ್ಕೃತದಲ್ಲಿದ್ದರೂ ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ ಪ್ರಮುಖ ಲೌಕಿಕ ಕೃತಿ. ಒಂದನೇ ಬುಕ್ಕರಾಯನ ಸೊಸೆ ಗಂಗಾದೇವಿ, ತನ್ನ ಪತಿ ಕಂಪಣರಾಯನು ಮಧುರೈಯನ್ನು ಗೆದ್ದ ಸಾಹಸವನ್ನು ಇದರಲ್ಲಿ ವಿವರಿಸಿದ್ದಾಳೆ.
- ಪ್ರೌಢ ದೇವರಾಯ II – ರತಿರತ್ನ ಪ್ರದೀಪಿಕಾ (ಸಂಸ್ಕೃತ): ಕಾಮಶಾಸ್ತ್ರದ ಗ್ರಂಥ.
- ಕೃಷ್ಣದೇವರಾಯ – ಆಮುಕ್ತಮಾಲ್ಯದ (ತೆಲುಗು): ವಿಷ್ಣುವಿನ ಮೇಲೆ ರಚಿತವಾದರೂ ಪ್ರಣಯ ವರ್ಣನೆಗಳಿಂದ ಕೂಡಿದ ಮಹಾಕಾವ್ಯ.

ಈ ಲೌಕಿಕ ಸಾಹಿತ್ಯವು ವಿಜಯನಗರದ ರಾಜರ ಸಹಿಷ್ಣುತೆ, ಸಾಂಸ್ಕೃತಿಕ ವೈಭವ ಮತ್ತು ಸಮಾಜದ ಬಹುಮುಖತೆಯನ್ನು ಪ್ರತಿಬಿಂಬಿಸುತ್ತದೆ. ಧಾರ್ಮಿಕ ಸಾಹಿತ್ಯಕ್ಕಿಂತ ಕಡಿಮೆಯಾದರೂ, ಕೂಡಾ ಕನ್ನಡ ಭಾಷೆಯ ಸಮಗ್ರ ಬೆಳವಣಿಗೆಗೆ ಪ್ರಮುಖ ಕೊಡುಗೆಯನ್ನು ನೀಡಿತು.

**ಕನ್ನಡದ ಪುನರುತ್ಥಾನ:**

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕನ್ನಡ ಸಾಹಿತ್ಯವು ಮಹತ್ವದ ಪುನರುತ್ಥಾನವನ್ನು ಕಂಡಿತು. ಹೊಯ್ಸಳ ಯುಗದ ಜೈನ ಧರ್ಮದ ಪ್ರಾಬಲ್ಯ ಮತ್ತು ಚಂಪೂ ಶೈಲಿಯ ಸಂಕುಚಿತತೆಯಿಂದ ಹೊರಬಂದು, ವೀರಶೈವ ಹಾಗೂ ವೈಷ್ಣವ ಭಕ್ತಿ ಚಳವಳಿಗಳ ಮೂಲಕ ಕನ್ನಡವು ಜನಸಾಮಾನ್ಯರಿಗೆ ಸುಲಭವಾಗಿ ತಲುಪಿತು. ವೀರಶೈವ ವಚನ ಸಾಹಿತ್ಯವು ಸಮಾನತೆ ಮತ್ತು ಸಾಮಾಜಿಕ ಸುಧಾರಣೆಯನ್ನು ಸಾರಿದರೆ, ಹರಿದಾಸರ ಕೀರ್ತನೆಗಳು ಭಕ್ತಿಯನ್ನು ಜನಪ್ರಿಯಗೊಳಿಸಿದವು. ಜನಪದ ಭಾಷೆ ಮತ್ತು ಷಟ್ಪದಿ ಛಂದಸ್ಸಿನ ಬಳಕೆಯಿಂದ ಸಾಹಿತ್ಯ ಸರಳ ಹಾಗೂ ಜೀವಂತವಾಯಿತು; ಕುಮಾರವ್ಯಾಸನ ಗದುಗಿನ ಭಾರತ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ರಾಜಾಶ್ರಯ, ವಿಶೇಷವಾಗಿ ಎರಡನೇ ದೇವರಾಯ ಮತ್ತು ಕೃಷ್ಣದೇವರಾಯನ ಪ್ರೋತ್ಸಾಹದಿಂದ, ಕನ್ನಡ ಸಾಹಿತ್ಯ ಮತ್ತು ಭಾಷೆ ಸಮೃದ್ಧಗೊಂಡಿತು. ವಿಜಯನಗರ ಪತನದ ನಂತರವೂ ಸರ್ವಜ್ಞ, ಶಿಶುನಾಳ ಶರೀಫ್ ಮುಂತಾದ ಕವಿಗಳ ಮೂಲಕ ಈ ಪರಂಪರೆ ಮುಂದುವರಿದು, ಆಧುನಿಕ ಕನ್ನಡ ಸಾಹಿತ್ಯಕ್ಕೆ ಭದ್ರವಾದ ಬುನಾದಿಯಾಯಿತ್ತೆಂದು ಮನವರಿಕೆಯಾಗುತ್ತದೆ.

**ಉಪಸಂಹಾರ:**

ವಿಜಯನಗರ ಸಾಮ್ರಾಜ್ಯವು ಕನ್ನಡ ಸಾಹಿತ್ಯದ ಚಿನ್ನದ ಯುಗವಾಗಿದ್ದು, ಭಾಷೆಯ ಪುನರುತ್ಥಾನಕ್ಕೆ ಹಾಗೂ ದಕ್ಷಿಣ ಭಾರತದ ಸಾಂಸ್ಕೃತಿಕ ಗುರುತಿನ ಬಲವರ್ಧನೆಗೆ ಮಹತ್ತರ ಕೊಡುಗೆಯನ್ನು ನೀಡಿತು. ರಾಜಕೀಯ–ಸೈನಿಕ ಶಕ್ತಿಯ ಜೊತೆಗೆ, ವೀರಶೈವ ಮತ್ತು ವೈಷ್ಣವ ಚಳವಳಿಗಳ ಮೂಲಕ ಭಕ್ತಿ ಹಾಗೂ ಲೌಕಿಕ ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸಿ, ಭಾಷೆಯ ಮಾನಕೀಕರಣ ಮತ್ತು ಸಾಂಸ್ಕೃತಿಕ ಸಂಯೋಜನೆಯನ್ನು ಸಾಧಿಸಿತು. ಇದರ ಸಾಹಿತ್ಯಿಕ ಪರಂಪರೆ ಪುರಂದರದಾಸ, ಕನಕದಾಸರ ಕೀರ್ತನೆಗಳು ಮತ್ತು ವಚನ ಸಾಹಿತ್ಯದ ಪ್ರಭಾವದ ಮೂಲಕ ಇಂದಿಗೂ ಜೀವಂತವಾಗಿದ್ದು, ನಂತರದ ದಿನಗಳಲ್ಲಿ ಮೈಸೂರಿನ ಒಡೆಯರ್ ಹಾಗೂ ಕೆಳದಿಯ ನಾಯಕರ ಆಡಳಿತಗಳಲ್ಲಿಯೂ ಮುಂದುವರಿಯಿತು. ಒಟ್ಟಿನಲ್ಲಿ, ವಿಜಯನಗರದ ಸಾಂಸ್ಕೃತಿಕ ವೈಭವವು ಕನ್ನಡವನ್ನು ಜೀವಂತ, ಸಮೃದ್ಧ ಭಾಷೆಯಾಗಿ ರೂಪಿಸಿ, ಭಾರತೀಯ ಸಾಹಿತ್ಯದ ಸುವರ್ಣ ಯುಗದ ಸಂಕೇತವಾಗಿ

ಅಜರಾಮರವಾಗಿ ಉಳಿದಿದೆ.

**ಪರಾಮರ್ಶನ ಗ್ರಂಥಗಳು:**


1. ನರಸಿಂಹಾಚಾರ್ಯ, ಆರ್. (1988). ಕನ್ನಡ ಸಾಹಿತ್ಯದ ಇತಿಹಾಸ. ಏಷ್ಯನ್ ಎಜುಕೇಶನಲ್ ಸರ್ವೀಸಸ್.
2. ರೈಸ್, ಇ. ಪಿ. (1982). ಕನ್ನಡ ಸಾಹಿತ್ಯದ ಇತಿಹಾಸ (2ನೇ ಆವೃತ್ತಿ ). ಏಷ್ಯನ್ ಎಜುಕೇಶನಲ್ ಸರ್ವೀಸಸ್. (ಮೂಲ ಕೃತಿ 1921ರಲ್ಲಿ ಪ್ರಕಟಿತ)
3. ಶಿವಪ್ರಕಾಶ್, ಎಚ್. ಎಸ್. (1997). ಕನ್ನಡ. ಎ. ಕೆ. ರಾಮಾನುಜನ್ (ಸಂಪಾ.), ದಿ ಆಕ್ಸ್ಫರ್ಡ್ ಇಂಡಿಯಾ ರಾಮಾನುಜನ್ (ಪು. 123–145). ಆಕ್ಸ್ಫರ್ಡ್ ಯೂನಿವರ್ಸಿಟಿ ಪ್ರೆಸ್.
4. ಶಾಸ್ತ್ರಿ, ಕೆ. ಎ. ನೀಲಕಂಠ. (2002). ದಕ್ಷಿಣ ಭಾರತದ ಇತಿಹಾಸ: ಪ್ರಾಚೀನ ಕಾಲದಿಂದ ವಿಜಯನಗರದ ಪತನದವರೆಗೆ (4ನೇ ಆವೃತ್ತಿ ). ಆಕ್ಸ್ಫರ್ಡ್ ಯೂನಿವರ್ಸಿಟಿ ಪ್ರೆಸ್.
5. ಸೀವೆಲ್, ರಾಬರ್ಟ್. (2011). ಮರೆತುಹೋದ ಸಾಮ್ರಾಜ್ಯ: ವಿಜಯನಗರ; ಭಾರತದ ಇತಿಹಾಸಕ್ಕೆ ಒಂದು ಕೊಡುಗೆ. ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್. (ಮೂಲ ಕೃತಿ 1900ರಲ್ಲಿ ಪ್ರಕಟಿತ)
6. ಸ್ಟೈನ್, ಬರ್ಟನ್. (1989). ವಿಜಯನಗರ (ದಿ ನ್ಯೂ ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ, ಸಂಪುಟ 1.2). ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್.
7. ವ್ಯಾಗ್ನರ್, ಫಿಲಿಪ್ ಬಿ. (2001). ರಾಜ, ಅರಮನೆ ಮತ್ತು ರಾಜಧಾನಿ: ವಿಜಯನಗರ ಕಾಲದ ಕನ್ನಡ ಸಾಹಿತ್ಯ ಮೂಲಗಳ ಸಂಕಲನ (ಸಿ. ಟಿ. ಎಂ. ಕೊಟ್ರಯ್ಯ, ಅನು.). ಮನೋಹರ್ ಪಬ್ಲಿಷರ್ಸ್.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.